UNSTARRED QUESTIONS AND ANSWERS

ಸಣ್ಣ ಹಿಡುವಳಿದಾರರ ಯೋಜನೆ

೧. (೨) ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ) —

ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ದಯೆಯಿಟ್ಟು ಈ ವಿಷಯಗಳನ್ನು ತಿಳಿಸುವರೆ:—

(ಅ) ಯಾವ ಯಾವ ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿ ಮತ್ತು ಮಾರ್ಜಿನಲ್ ಸಣ್ಣ ಹಿಡುವಳಿದಾರರ ಐ. ಎ. ಪಿ. ಪಿ. ಯೋಜನೆಗಳು ಜಾರಿಯಲ್ಲಿವೆ ;

(ಆ) ಯಾವ ಯಾವ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಈ ಮೇಲ್ಕಂಡ ಯೋಜನೆಗಳು ಜಾರಿಯಲ್ಲಿಲ್ಲ :

(ಇ) ಈ ಮೇಲ್ಕಂಡ ಯೋಜನೆಗಳನ್ನು ಯಾವ ಯಾವ ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿ ಜಾರಿಮಾಡಲು ೧೯೭೩-೭೪ ನೇ ಮತ್ತು ೧೯೭೪-೭೫ನೇ ಸಾಲಿನಲ್ಲಿ ಸರ್ಕಾರದವರು ಕಾರ್ಯಕ್ರಮ ಕೈಗೊಳ್ಳಲುದ್ದೇಶಿಸಿದ್ದಾರೆ ?

ಶ್ರೀ ಕೆ. ಎಚ್. ಪಾಟೀಲ್.— (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು)

ಉತ್ತರ.—(ಅ) ಸಣ್ಣ ಹಿಡುವಳಿದಾರರ ಯೋಜನೆಯು ಬೆಂಗಳೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಮೈಸೂರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಬೀದರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಮತ್ತು ಉತ್ತರ ಕೆನರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಜಾರಿಯಲ್ಲಿವೆ. ಮಾಭಿಶನಲ್ಲಿ ರೈತರ ಮತ್ತು ಕೃಷಿ ಕಾರ್ಮಿಕರ ಯೋಜನೆಯು ತುಮಕೂರುಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ, ದಕ್ಷಿಣ ಕೆನರ ಜಿಲ್ಲೆಯ ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳಲ್ಲೂ, ಬಿಜಾಪುರ ಜಿಲ್ಲೆಯ ಇಂಡಿ, ಸಿಂದಗಿ ಜಮಖಂಡಿ, ಮುದೋಳ್, ಬಿಜಾಪುರ ಮತ್ತು ಬಾಗೇವಾಡಿ ತಾಲ್ಲೂಕುಗಳಲ್ಲೂ ಜಾರಿಯಲ್ಲಿವೆ.

(ಆ) ಮೇಲೆ ಹೇಳಿದ ಜಿಲ್ಲೆಗಳು ಮತ್ತು ತಾಲ್ಲೂಕುಗಳನ್ನು ಬಿಟ್ಟು, ರಾಜ್ಯದ ಉಳಿದ ಜಿಲ್ಲೆಗಳು ಮತ್ತು ತಾಲ್ಲೂಕುಗಳಲ್ಲಿ ಈ ಯೋಜನೆಗಳು ಜಾರಿಯಲ್ಲಿಲ್ಲ.

(ಇ) ೧೯೭೩-೭೪ರಲ್ಲಿ ಈ ಯೋಜನೆಯನ್ನು ಇತರ ಜಿಲ್ಲೆಗಳಲ್ಲಿ ಜಾರಿಮಾಡುವ ಯೋಜನೆಯಿಲ್ಲ. ಆದರೆ ಐದನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಯೋಜನೆಯನ್ನು ಜಾರಿಮಾಡುವ ವಿಚಾರ ಸರ್ಕಾರದ ಪರೀಶಿಲನೆಯಲ್ಲಿದೆ.